Regd. No M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ [illegible] ರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂವತ್ಸರ 30 ಸಂಚಿಕೆ 261 | ಗುರುವಾರ 12—6—47 | ಬಿಡಿ ಪ್ರತಿ 3 ಪೈ

ಧ. ಯು. ಸ. ಬುಲೆಟಿನ್

ಪ್ರ.— ರಾಜಾ ಎಸ್. ಗುರುರಾಜಾ
ಚಾರ್ಯ, ಅಖಿಲ ಕರ್ನಾಟಕ
ಸನಾತನಿಗಳ ಸಂಘ, ಮಂತ್ರಾಲಯ.

ಧರ್ಮ ಯುದ್ಧದಲ್ಲಿ ಎಲ್ಲರೂ ಭಾಗವಹಿಸಿದ್ದಾರೆ

ತಾ|| 14—5—47 ರಿಂದ 20—5—47 ರವರೆಗೆ ನಡೆದ ಸತ್ಯಾಗ್ರಹದಲ್ಲಿ ಭಾರತದ ದೊಡ್ಡ ದೊಡ್ಡ ಪಂಡಿತರೂ, ಯತಿಗಳೂ, ಸಾಧುಗಳೂ ಭಾಗವಹಿಸಿದ್ದಾರೆ. ಅಷ್ಟೇ ಏಕೆ, ಹಿಂದೂ ಸಭಾ, ಸಿಖ್ ಆರ್ಯ ಸಮಾಜದ ಅನುಯಾಯಿಗಳೂ ಭಾಗವಹಿಸಿದ್ದಾರೆ. ಆದ್ದರಿಂದ ಸರ್ಕಾರವು ಇದನ್ನು ಉಪೇಕ್ಷಿಸುವಂತಿಲ್ಲವೆಂದು ಸನಾತನಿಗ ಸತ್ಪಿಕಾ ಪತ್ರಿಕಾ ಬಾತ್ಮಿದಾರನು ತಿಳಿಸುತ್ತಾನೆ.

ಅಯೋಧ್ಯೆಯಿಂದ ಧರ್ಮ ಯುದ್ಧಕ್ಕೆ ಹೊರಟ 5 ನೇ ಧರ್ಮ ದಳದಸೇನಾ ನಾಯಕತ್ವವನ್ನು ಪಹಿಸಿ ಪ್ರಖ್ಯಾತ ರಾಜ ಗೋಪಾಲ ಮಹಾಪಾಠಶಾಲಾ ಪ್ರಧಾನಾಧ್ಯಾಪಕರೂ, ಭಾರತೀಯ ರಾಜನೀತಿ ವಿದ್ಯಾಪೀಠದ ಪ್ರಧಾನಾಧ್ಯಪಕರೂ ಆದ ಪ್ರಖ್ಯಾತ ಮಹಾಪಂಡಿತ ಶ್ರೀ ರುದ್ರ ಪ್ರಸಾದರು ಇಲ್ಲಿಗೆ ಬಂದಿದ್ದಾರೆ.

ಧರ್ಮ ಯುದ್ಧದಲ್ಲಿ ೧೨೫ ವರ್ಷ ವಯಸ್ಕ !

ವೈಸ್ರಾಯಿ ಭವನದೆದುರು ಸತ್ಯಾಗ್ರಹ ಮಾಡಿದ 15 ಜನ ಧರ್ಮ ವೀರರಲ್ಲಿ ಕೊಡಸೆ — 125 ವರ್ಷದ ಸಿದ್ಧ ಮಹಾತ್ಮ ಶ್ರೀ ಪಹಾಡಿಬಾಬಾರವರೂ ಬಂಧಿತರಾದರು.

ಹೃಷೀ ಕೇಶದ ಮಹಾತ್ಮಾ ಬ್ರಹ್ಮಜ್ಞೋಧಾಶ್ರಮಜೀಯವರ ನಾಯಕತ್ವದಲ್ಲಿ 15—15 ಜನರ 3 ದಳಗಳು ಶ್ರೀ ನೆಹರು, ಪಟೇಲ್, ವೈಸ್ರಾಯ್ ಭವನಗಳೆದುರು ಸತ್ಯಾಗ್ರಹ ಮಾಡಿ ದಸ್ತಗಿರಿಯಾದರು.

ಉತ್ತರ ಕಾಶಿಯ ಬ್ರಹ್ಮಚಾರಿ ಶ್ರೀ ಸ್ವರೂಪಾನಂದರು, ಬೃಂದಾವನದ ಏಹಾರಾಲಾ ಮಂದಿರದ ವ್ಯವಸ್ಥಾಪರಾದ ಗೋ ಸ್ವಾಮಿ ಶ್ರೀ ಮನಮೋಹನರೂ ಧರ್ಮದರ್ಶಿಗಳೊಡನೆ ದೆಹಲಿಗೆ ಬಂದಿದ್ದಾರೆ

ಶ್ರೀ ನೆಹರೂ ಮುಂತಾದವರು ದೆಹಲಿಯಲ್ಲಿಲ್ಲವಾಗಿ ಹತ್ತತ್ತು ಜನರ ಎರಡು ದಳಗಳು ಕೆಂಪುಕೋಟೆ, ಚಾಂದನೀ ಚೌಕ, ವೈಸ್ರಾಯಿ ಭವನ ಮುಂತಾದೆಡೆ ಸತ್ಯಾಗ್ರಹ ಮಾಡಿ ಬಂಧಿತರಾದರು. ಈ ಸತ್ಯಾಗ್ರಹ ನೊಡಲು ಸೆಕ್ರೆಟರಿ ಯೇ ನಟ ಎಲ್ಲ ಜನರೂ ಬಂದಿದ್ದರು.

ನವದೆಹಲಿ 13-5-47

ದೆಹಲಿಯ ಕಾರಾಗಾರದಲ್ಲಿ ತಮ್ಮನ್ನು ಸರಿಯಾಗಿ ನೋಡಲಿಲ್ಲವೆಂದೂ, ತಮ್ಮ ದಂಡಗಳನ್ನು ಕಿತ್ತುಕೊಂಡಿದ್ದಾರೆಂದೂ, ಸ್ವತಃ ನೀರು ನೀಡಿ ಕುಡಿಯಲು ಅವಕಾಶ ಕೊಡಲಿಲ್ಲವೆಂದೂ 57 ಜನ ಸನ್ಯಾಸಿಗಳು ನಿರ್ಜಲ ನಿರಾಹಾರೋಪವಾಸ ಮಾಡುತ್ತಿದ್ದಾರೆ. ಈ ಪೈಕಿ ಶ್ರೀ ಶಿವಚೈತನ್ಯ ನೈಷ್ಟಿಕ, ಶ್ರೀ ಋಷಿ ರಾಮ ಬ್ರಹ್ಮಚಾರಿ, ಶಂಕರ ಹತ್ತ, ಶುಕ್ಲ, ರಾಮನರೇಶ ಯೋಗಿ ರಾಜ, ಶ್ರೀ ಸ್ವಾಮಿ ಕೃಷ್ಣಾನಂದ ತೀರ್ಥ, ಸ್ವಾಮಿ ಕೃಷ್ಣೇಶ್ರಮ, ಸ್ವಾಮಿ ಬ್ರಹ್ಮ ವರ್ಧಾಶ್ರಮ, ಸ್ವಾಮಿ ಗೋವಿಂದಾತ್ರಮ ಸ್ವಾಮಿ ಮುಕುಂದಾಶ್ರಮ ಸಮರ್ಥದಾಮೋದರಾನಂದ ತೀರ್ಥ, ಸ್ವಾಮಿ ಮಹೇಶ್ವರಾಶ್ರಮ, ಸ್ವಾಮಿ ಪುರುಷೋತ್ತಮಾಶ್ರಮ, ಶ್ರೀ ಷಡಾನಂದಾಶ್ರಮ ಮೊದಲಾದವರು ಅತಿ ಮುಖ್ಯರಾದವರು.

ಶ್ರೀ ಹರಿರಾಮ ಮಿಶ್ರದ ನಾಯಕತ್ವದಲ್ಲಿ ಹರಿದ್ವಾರದ ಗಂಗಾ ಸಭಾದ ಧರ್ಮವೀರರು ಸತ್ಯಾಗ್ರಹಕ್ಕಾಗಿ ಬಂದಿದ್ದಾರೆ.

ದೆಹಲಿ 13—5—47— ಶ್ರೀ ದಂಡಿ ಸ್ವಾಮಿ ಲಕ್ಷ್ಮೀಶ್ವರಾಶ್ರಮರ ಮಹಾರಾಜರ ನಾಯಕತ್ವದಲ್ಲಿ 20 ಜನರು ಸತ್ಯಾಗ್ರಹಮಾಡಿ ವೈಸ್ರಾಯ್ ಭವನ ಮುಂದೆ ದಸ್ತಗಿರಿಯಾದರು.

36 ಜನ ಧರ್ಮವೀರರು ಈ ದಿನ ಬಿಡುಗಡೆ ಹೊಂದಿದರು. ಅವರು ಪತ್ರಿಕಾ ಕರ್ತರಿಗೆ ಕೊಟ್ಟ ಹೇಳಿಕೆ ಹೀಗೆ ಇದೆ.— ಧರ್ಮವೀರರಿಗೆ ಸರಿಯಾಗಿ ಆಹಾರ ಕೊಡುತ್ತಿಲ್ಲ. ಕೊಳಿಕು ರೂ [illegible] ಸರಿಯಾಗಿ ಕೊಡುತ್ತಿಲ್ಲ. ಧರ್ಮವೀರರನ್ನು ಕೆಟ್ಟ ರೀತಿಯಲ್ಲಿ ಕಾಣಲಾಗುತ್ತಿದೆ.

ಘ್ರಾಂಸಿನಲ್ಲಿ ರೊಟ್ಟಿಗಾಗಿ

ಫ್ರೆಂಚು ರಾಜಧಾನಿಯಾದ ಪ್ಯಾರಿಸ್ಸು ನಗರದಲ್ಲಿಯ ಗೃಹಿಣಿಯರೆಲ್ಲರೂ ಕ್ರೋಧೋದ್ರಿಕ್ತರಾಗಿ ನಗರದಲ್ಲಿಯ ರೊಟ್ಟಿಯ ಅಂಗಡಿಗಳನ್ನೆಲ್ಲಾ ಒಂದೇ ಕಾಲದಲ್ಲಿ ಮುತ್ತಿಗೆ ಹಾಕಿ ರೇಷನ್ ಚೀಟಿಗಳನ್ನು ನೋಡಿಸದೆ ಖರೀದಿಯನ್ನು ಪಾಪಿಸವನ ಮೋರೆಯು ಮೇಲಿ ಎಸೆದು ರೊಟ್ಟಿಗಳನ್ನೆಲ್ಲವನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋದರು.

ಈ ಬಗೆಯ ಪ್ರವಾದವನ್ನು ತಡೆಯಬೇಕೆಂಬ ಊಹೆಯೊಡನೆ ಪ್ರತಿ ರೊಟ್ಟಿಯ ಅಂಗಡಿಯ ಹತ್ತಿರ ಸಾಯುಧ ಸೈನಿಕರನ್ನು ಸರ್ಕಾರವು ಕಾವಲಿಟ್ಟಿದೆ. ಹೀಗೆ ರೇಷನ್ ಚೀಟಿಗಳನ್ನು ತೋರಿಸದೆ ತೆಗೆದುಕೊಂಡು ಹೋಗುವದು ಮಹಾ ಅಪರಾಧವೆಂದು ಪ್ರಕಟಿಸಲ್ಪಟ್ಟಿದೆ.

೬೦ ವರ್ಷದ ಮುದುಕನ ಮೇಲೆ ಕಶಾ ಪ್ರಹಾರ

ಸದ್ವಂಶ ಸಂಜಾತನಾದ 80 ವರ್ಷದ ಮುದುಕನಾದ ಸಾಧುವಾದ ಶ್ರೀ ಈಶ್ವರಸಿಂಹನೆಂಬ ಧರ್ಮವೀರನನ್ನು ಪೋಲೀಸು ಅಧಿಕಾರಿಯು ಕಶೆಯಿಂದ ಥಳಿಸಿದಾಗ ವೃದ್ಧನಿಂತೆಂದನೆಂದು 'ಸಂಸ್ಕೃತ' ಪತ್ರಿಕಾ ಬಾತ್ಮಿಯು ತಿಳಿಸುತ್ತದೆ — " ಅಯ್ಯಾ ! ಬಂಧುವೇ ನನ್ನನ್ನು ಹೊಡೆದು ನಿನ್ನಿಷ್ಟವನ್ನು ಪೂರ್ತಿ ಮಾಡಿಕೋ, ಆದರೆ ನನ್ನಂಥಹ ವೃದ್ಧನಿಗೆ ಈ ಧರ್ಮ ಯುದ್ಧದಲ್ಲಿ ಬಲಿದಾನ ಮಾಡಲು ಅವಕಾಶ ಕೊಟ್ಟ ನಿನಗೆ ದೇವರು ಮಂಗಳವನ್ನುಂಟು ಮಾಡಲಿ ' .....

ದೆಹಲಿ 14-5-47

ಧರ್ಮ ಯುದ್ಧದ ಹದಿನೇಳನೇ ಸೇನಾಪತಿಗಳಾದ ಶ್ರೀ ಆತ್ಮಾರಾಮ ಧರ್ಮರ ನೇತೃತ್ವದಲ್ಲಿ ಇಂದು 20—20 ಜನರ ಎರಡು ಧರ್ಮವೀರರ ಗುಂಪು ಸತ್ಯಾಗ್ರಹ ಮಾಡಿ ದಸ್ತಗಿರಿಯಾದವು.

ಇಂದಿನ ವರ್ತಮಾನ

ವಾಷಿಂಗ್ ಟನ್ ಜೂನ್ 11 — ಭಾರತಕ್ಕೆ 80 ಸಾವಿರ ಟನ್ ಹೆಚ್ಚು ಸಕ್ಕರೆ ಕೊಡಲು ಅಂತರ ರಾಷ್ಟ್ರೀಯ ಆಹಾರ ಸಮಿತಿಯಲ್ಲಿ ಶಿಫಾರಸು ದೊರೆತಿದೆ.

ಕಲ್ಕತ್ತಾ ಜೂನ್ 9 — ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಕೆಲ ವಿದ್ಯಾರ್ಥಿಗಳು ಕಾಪೀ ಮಾಡುತ್ತಿದ್ದಕ್ಕಾಗಿ ಹೊರಗೆ ಹಾಕಲು ವಿದ್ಯಾರ್ಥಿಗಳ ಗುಂಪು ಪರೀಕ್ಷಾ ಸ್ಥಳದ ಮೇಲೆ ನುಗ್ಗಲು ಬಂದಿತು. ಪೋಲೀಸರು ಹತೋಟಿಗೆ ತಂದರು.

ಹೈದರಾಬಾದು — ಪ್ರಮುಖ ಕಾಂಗ್ರೆಸ್ ಮುಖಂಡರಾದ ಶ್ರೀ ವೈದ್ಯರು ಕಳೆದ ಶುಕ್ರವಾರ ರಘುನಾಥಭಾಗ್‌ನಲ್ಲಿ ಮಾಡಿದ ಭಾಷಣದಲ್ಲಿ ಹೈದರಾಬಾದು ಹಿಂದೂಸ್ಥಾನಕ್ಕೆ ಸೇರಬೇಕೆಂದರು.

ನವದೆಹಲಿ — ಹೈದರಾಬಾದು ಹಿಂದೂಸ್ಥಾನಕ್ಕಾಗಲೀ, ಪಾಕಿಸ್ತಾನಕ್ಕಾಗಲಿ, ಸೇರದೆ ಸ್ವತಂತ್ರವಾಗಿರುವುದೆಂದು ಹೇಳಲಾಗಿದೆ.

ಬೆಂಗಳೂರು ಜೂನ್ 11 — ಬೆಂಗಳೂರು ಪ್ರಸಿದ್ಧ ವಕೀಲರಾಗಿದ್ದ ವಾಮನ ಮೂರ್ತಿಯವರು ಬೆಂಗಳೂರು ನೆಲಮಂಗಲ ರಸ್ತೆಯಲ್ಲಿ ತಮ್ಮ ಕಾರಿನಲ್ಲಿ ಬರುತ್ತಿರುವಾಗ ಗಿಡಕ್ಕೆ ಕಾರು ಬಡಿದು ಕೆಳಗೆ ಬಿದ್ದು ಕೂಡಲೇ ಮೃತಪಟ್ಟರು.

ಬೆಂಗಳೂರು ಜೂನ್ 10 — ನ್ಯಾಯವಿಧಾಯಕ ಸಭೆಯು ಆಯವ್ಯಯ ಅಧಿವೇಶನವು ಜೂನ್ 19 ರಿಂದ ಜುಲೈ 4 ರ ವರೆಗೆ ನಡೆಯುವುದು

ಮದರಾಸು ಜೂನ್ 10 — ತಿರುಪತಿ ದೇವಾಲಯಕ್ಕೆ ಹರಿಜನ ಪ್ರವೇಶ ಅಡ್ಡಿಪಡಿಸಿ ಕೊಟ್ಟಿದ್ದ ಇಂಜಂಕ್ಷನ್ ಆಜ್ಞೆಯನ್ನು ಹೈಕೋರ್ಟಿನವರು ತೆಗೆದು ಹಾಕಿದ್ದಾರೆ.

ನವದೆಹಲಿ ಜೂನ್ 11 — ಆಫ್ರಿಕಾದಲ್ಲಿರುವ ಭಾರತೀಯರು ತಾವು ಆಫ್ರಿಕಾ ದೇಶೀಯರ ಅತಿಥಿಗಳೆಂದು ತಿಳಿಯಬೇಕು, ಭಾರತೀಯರು ಆಫ್ರಿಕನ್ನರಿಗೆ ಸ್ವಾತಂತ್ರ್ಯ ಪಡೆಯಲು ಪೂರ್ಣ ಸಹಾಯ ನೀಡಬೇಕೆಂದು ಪಂಡಿತ ನೆಹರೂರವರು ಹೇಳಿರುವರು.

Edited, Printed and Published by M. S Krishna Rao at the Satyavadi Press Chamara Agrahar, Mysore.

ಅಮೇರಿಕಾ

ಅಮೇರಿಕಾದ ಕಾರ್ಯಗಳನ್ನು ನೋಡುತ್ತಿದ್ದರೆ, ಧನಬಲದಿಂದ ಬಲಹೀನ ರಾಜ್ಯಗಳನ್ನು ತನ್ನ ಮಾತಿನಂತೆ ಇಟ್ಟುಕೊಳ್ಳಲು ನೋಡುತ್ತಿದೆ. ಆದರೂ ಪ್ರಪಂಚವನ್ನು ಹೆದರಿಸಿಯಾದರೂ ತಮ್ಮ ಅಧೀನಕ್ಕೆ ಕಂದುಕೊಳ್ಳಲು ಪ್ರಯತ್ನಿಸುತ್ತಿರುವದೆಂದೆನ್ನಲು ನಿದರ್ಶನಗಳು ಕಾಣುತ್ತಿವೆ. ಬ್ರಿಟನ್ನಿಗೆ ಸಾಲವನ್ನು ಕೊಟ್ಟಿರುವದು, ತುರ್ಕಿ ಗ್ರೀಸಿಗೆ ಸಹಾಯಮಾಡುವಿಕೆ, ಆಟಂ ರಹಸ್ಯಗಳನ್ನು ಸ್ವಂತವಾಗಿ ನೋಡುವಿಕೆ, ಇವುಗಳೆಲ್ಲವುಗಳಿಂದಿಗೆ ಯುವಕರೆಲ್ಲರೂ ಆರು ತಿಂಗಳುಗಳವರೆಗೂ ನಿರ್ಬಂಧ ಸೈನಿಕ ಶಿಕ್ಷಣೆಯನ್ನು ಪಡಿಯಬೇಕೆಂಬ ಶಾಸನವನ್ನು ತರಲು ಪ್ರಯತ್ನ, ಇವನ್ನು ನೋಡಿದಲ್ಲಿ ಮೇಲೆ ಶಾಂತಿ ವಚನ ನುಡಿದರೂ ಅಮೇರಿಕಾವು ಒಳಗೊಳಗೆ ಪ್ರಪಂಚ ಮೂರನೇ ಯುದ್ಧಕ್ಕೆ ತಯಾರಾಗುತ್ತಿದೆಯೆಂಬುದು ಕಾಣಬಹುದಲ್ಲವೆ ? (ಮಾ. ಭೂ)

ವಿವಾಹ ಮಹೋತ್ಸವ

ಮೈಸೂರು ಜೂ 11— ಮ || ಲಾಯರ್ ಜಿ. ವಿ. ವೆಂಕಟರಮಣಯ್ಯನವರು ತಮ್ಮ ತಮ್ಮ ಮ || ಆಡಿಟರ್ ಜಿ. ವಿ. ಈಶ್ವರಯ್ಯನವರ ಕುಮಾರ್ತಿ ಚಿ || ಸೌ || ಶಾಂತಾದೇವಿಯವರನ್ನು, ಮ || ಅಡ್ವೊಕೇಟ್ ಅವಂತರಾಮಯ್ಯನವರ ತಮ್ಮ ಚಿ || ಆರ್. ಶಿವರಾಮಯ್ಯನವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು.

ಹರಾಜು ನೋಟೀಸು

1947 ನೇ ಇಸವಿ ಜೂನ್ ಮಾಹೆ 21 ನೇ ಮತ್ತು 22 ನೇ ತಾರೀಖುಗಳಲ್ಲಿ ಅರಮನೆ ಗ್ಯಾರೇಜಿನಲ್ಲಿ ಬೆಳಿಗ್ಗೆ 9 ಘಂಟೆಯಿಂದ ಮಧ್ಯಾಹ್ನ 1 ಘಂಟೆಯವರೆಗೆ ಸ್ಥಿತಿಯಲ್ಲಿರುವ ಅನೇಕ [illegible] ಲಾರಿಗಳೂ, ಬಸ್ಸುಗಳೂ ಮತ್ತು ಲಾರಿಗಳೂ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ವಿವರಗಳಿಗೆ ತಾಯಿನಾಡು ಮತ್ತು ಜನವಾಣಿಯಲ್ಲಿ 1947 ನೇ ಜೂನ್ 7 ಮತ್ತು 14 ನೇ ತಾರೀಖು ಪ್ರಕಟವಾಗುವ ಜಾಹಿರಾತನ್ನು ದಯವಿಟ್ಟು ನೋಡಿ,

ಸೂಪರಿಂಟಿಂಡೆಂಟ್
ಪ್ಯಾಲೇಸ್ ಗ್ಯಾರೇಜ್
ಮೈಸೂರು.

ಅಕ್ಕರ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನವಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

For Quality Printing
L. N. Press
Sriramp[illegible]et, MYSORE

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಅರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರದೇಶಕ್ಕೆ ಅಂಚೆವೆಚ್ಚ ಸೇರಿ 1--12--0

At Opera 8th Glorious Week
RAJAKUMARI
ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ
ರಾಜಕುಮಾರಿ
(ತಮಿಳು)

200 ಸಾರಿ ಅಟ್ಲಾಂಟಿಕನ್ನು ದಾಟಿರುವನು

ಗ್ರೈಪ್ ಸಿರಪ್
ಟ್ರೇಡ್ ITL ಮಾರ್ಕ್
ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ಸಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದು ಮಕ್ಕಳ ಸೇವನೆಗೆ ಅನುಕೂಲವಾದುದು.
ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ
ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.
— ತಯಾರಿಕರು —
The Mysore Industrial & Testing Laboratory Ltd..
Malleswaram P. O. Bangalore

OFFICE OF THE PRESIDENT
CITY MUNICIPAL COUNCIL
MYSORE, Dated 3–6–46

Notification

Applications are invited for the post of a clock winder for the maintenance of the Tower & Office Clocks of the City Municipality, Mysore. Only those who are specialists in this field need apply with copies of Testimonials etc. on or before 15 th June 1947, stating the minimum remuneration expected.

K. G. KATWEY
For President